ಶ್ರೀರಾಮಕೃಷ್ಣರ ನರರೂಪದ ಉಪಯುಕ್ತತೆಯ ಸಂಬಂಧವಾಗಿ ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ:

"ಯಾವುದೇ ಜನಾಂಗವಾಗಿರಲಿ, ಅದಕ್ಕೆ ಒಂದು ಉನ್ನತ ಆದರ್ಶ ಇರಲೇಬೇಕು. 'ಪರಬ್ರಹ್ಮ'ವೇ ಆ ಆದರ್ಶ. ಬ್ರಹ್ಮವಸ್ತು ನಿರ್ಗುಣ ನಿರಾಕಾರವಾದುದರಿಂದ ಅದನ್ನು ಆಧರಿಸಿ ಸಾಮಾನ್ಯ ಮನುಷ್ಯನು ಯಾವುದೇ ಭಾವನಾರೂಪವಾದ ಆದರ್ಶವನ್ನು ಬಲಪಡಿಸಿ ಸಿದ್ಧಿಸಿಕೊಳ್ಳುವುದು ಅಸಾಧ್ಯ. ಆದುದರಿಂದ ಒಬ್ಬ ಆದರ್ಶ ವ್ಯಕ್ತಿಯ ಆವಶ್ಯಕತೆ ಇದೆ. ಶ್ರೀರಾಮಕೃಷ್ಣರಲ್ಲಿ ನಾವು ಈ ಆದರ್ಶವನ್ನು ಪಡೆದುಕೊಳ್ಳುತ್ತೇವೆ. ಇವರ ಹೊರತು, ಈ ಯುಗದಲ್ಲಿ ಆದರ್ಶಪ್ರಾಯರಾದ ಬೇರೊಬ್ಬ ವ್ಯಕ್ತಿ ನಮಗೆ ಸಿಗಲಾರರು. ಇದಕ್ಕೆ ಮುಖ್ಯಕಾರಣ, ಹಿಂದೊಮ್ಮೆ ಆದರ್ಶಪ್ರಾಯರೆನಿಸಿಕೊಂಡವರ ಕಾಲ ಈಗ ಮುಗಿದುಹೋಗಿದೆ. ಪ್ರಸ್ತುತಕಾಲದಲ್ಲಿ ವೇದಾಂತದ ಭಾವವನ್ನು ಪ್ರತ್ಯೇಕವಾಗಿ ಒಬ್ಬೊಬ್ಬರೂ ಯಾವರೀತಿಯಲ್ಲಿ ಗ್ರಹಿಸಿ ಅನುಸರಿಸಬೇಕು ಎನ್ನುವುದನ್ನು ಮಾರ್ಗದರ್ಶನ ಮಾಡುವವರ ಅಗತ್ಯವಿದೆ. ಈ ಕಾರ್ಯವನ್ನು ವರ್ತಮಾನಯುಗದ ಮಾನವರಲ್ಲಿ ಸಹಾನುಭೂತಿ, ಅನುಕಂಪ ಇರುವವರು ಮಾತ್ರವೇ ನೆರವೇರಿಸಲು ಸಾಧ್ಯ. ಈ ಅಗತ್ಯಗಳೆಲ್ಲವೂ ಶ್ರೀರಾಮಕೃಷ್ಣರಲ್ಲಿ ಸಂಪೂರ್ಣವಾಗಿ ಪೂರೈಸಿರುವುದನ್ನು ನಾವು ನೋಡುತ್ತೇವೆ."

ನಾವು ಸಾಧಾರಣ ಮನುಷ್ಯರಾದ ಕಾರಣ, ಅವತಾರಿಗಳ ಮಾನುಷಭಾವದ ಹಿರಿಮೆಯನ್ನು ಸ್ವಲ್ಪವೂ ಅರ್ಥಮಾಡಿಕೊಳ್ಳುವ ಸಾಮರ್ಥ್ಯ ನಮಗಿರುವುದಿಲ್ಲ. ಮಲಿನವಾದ ಮನಸ್ಸಿನಿಂದ ಆದಿ ಅಂತ್ಯ ರಹಿತನಾದ ಭಗವಂತನನ್ನು ಅರ್ಥ ಮಾಡಿಕೊಳ್ಳುವುದು ಹುಡುಗಾಟಿಕೆಯ ವ್ಯವಹಾರವಲ್ಲ!

ಮುಂಡಕೋಪನಿಷತ್ತಿನಲ್ಲಿ ವಿರಾಟ್ ಪುರುಷನ ಮೈನವಿರೇಳಿಸುವ ಸುಂದರ ವರ್ಣನೆ ಇದೆ: "ಯಾರ ಮಸ್ತಕವು ದ್ಯುಲೋಕದಲ್ಲಿರುತ್ತಾ, ಸೂರ್ಯಚಂದ್ರರೇ ಕಣ್ಣುಗಳಾಗಿ, ದಿಕ್ಕುಗಳೇ ಕಿವಿಗಳಾಗಿ, ವೇದಸಮೂಹವೇ ಪ್ರಕಟಗೊಂಡ ಮಾತುಗಳಾಗಿ, ಪ್ರಾಣವೇ ವಾಯುವಾಗಿ, ನಿಖಿಲಜಗತ್ತೇ ಅಂತಃಕರಣವಾಗಿದೆಯೋ ಮತ್ತು ಯಾರ ಪಾದಗಳಿಂದ ಪೃಥ್ವಿ ವ್ಯಕ್ತಗೊಂಡಿತೋ, ಅದೇ ಒಟ್ಟು ಎಲ್ಲಾ ಸ್ಥೂಲಭೂತಗಳ ಅಂತರಾತ್ಮ." ಈ ಮಂತ್ರವು ನಮ್ಮ ಮೈನಡಗಿಸುತ್ತದೆ; ಮನಸ್ಸಿನಲ್ಲಿ ಭಯವನ್ನು ಉಂಟುಮಾಡುತ್ತದೆ. ಯಾರ ಒಂದು ಕಣ್ಣು ಸೂರ್ಯನೋ, ಮತ್ತೊಂದು ಕಣ್ಣು ಚಂದ್ರನೋ ಆ ವಿರಾಟ್‌ಪುರುಷನನ್ನು ಹೇಗೆತಾನೇ ಪ್ರೀತಿಸುವುದು! ಈ ವಿರಾಟ್‌ಪುರುಷನೊಂದಿಗೆ ಸಂಬಂಧ ಕಲ್ಪಿಸಿಕೊಳ್ಳುವುದಾದರೂ ಹೇಗೆ? ಇದು ನಮ್ಮ ಕಲ್ಪನೆಗೆ ಮೀರಿದ್ದು. ಇದೇ ಕಾರಣಕ್ಕಾಗಿಯೇ ನಮಗೆ ರಾಮ, ಕೃಷ್ಣ, ಬುದ್ಧ, ಏಸುಕ್ರಿಸ್ತ, ರಾಮಕೃಷ್ಣರಾದಿಯಾಗಿ ಅವತಾರಪುರುಷರ ಅಗತ್ಯವಿದೆ. ಇವರೊಂದಿಗೆ ನಾವು ಮಾತನಾಡಬಹುದು, ಭಾವವಿನಿಮಯ ಮಾಡಿಕೊಳ್ಳಬಹುದು ಹಾಗೂ ಮಧುರ ಸಂಬಂಧವನ್ನು ಕಲ್ಪಿಸಿಕೊಳ್ಳಬಹುದು.

'ಶ್ರೀರಾಮಕೃಷ್ಣ ಲೀಲಾಪ್ರಸಂಗ' ಮತ್ತು 'ಶ್ರೀರಾಮಕೃಷ್ಣ ವಚನವೇದ' – ಈ ಎರಡೂ ಗ್ರಂಥಗಳಲ್ಲಿ ಶ್ರೀರಾಮಕೃಷ್ಣರ ಜೀವನ ಮತ್ತು ಅವರ ದಿವ್ಯೋಪದೇಶಗಳನ್ನು ವಿವರವಾಗಿ ನಿರೂಪಿಸಿ ದಾಖಲಿಸಲಾಗಿದೆ. ಶ್ರೀರಾಮಕೃಷ್ಣರ ದೈನಂದಿನ ಜೀವನ, ಇತರ ವ್ಯಕ್ತಿಗಳೊಡನೆ ಅವರ ಸಂಬಂಧ, ಅವರ ಪ್ರೀತ್ಯಾದರದ ಆಳ, ಇತರರ ಉದ್ಧಾರಕ್ಕಾಗಿ ಅವರ ತಳಮಳ, ಅವರು ವಾಸಿಸುತ್ತಿದ್ದ ಪರಿಸರ ಮತ್ತು ಇತರ ಅನೇಕ ಸಣ್ಣಪುಟ್ಟ ಘಟನೆಗಳು ಈ ಪುಸ್ತಕಗಳಲ್ಲಿ ಕಾಣಸಿಗುವ ವಿವರಣೆಗಳಲ್ಲಿ ಲಭ್ಯವಿವೆ.

ಅವತಾರಪುರುಷರ ಈ ಎಲ್ಲ ರೀತಿಯ ಸಾಧಾರಣ ಘಟನೆಗಳ ಮಾನಸಿಕ ದರ್ಶನ ಮತ್ತು ಮನನ ನಮ್ಮನ್ನು ಅವರ ಅತಿ ಸಮೀಪಕ್ಕೆ ಕರೆದೊಯ್ಯುತ್ತವೆ. ನಾವು ಅವರ ಮನುಷ್ಯಭಾವವನ್ನು ಕಂಡು ಮುಗ್ಧರಾಗಿ, ಮೋಹಿತರಾಗಿಬಿಡುತ್ತೇವೆ. ಅವರ ಜೀವನಕಥೆಯಲ್ಲಿ ಬರುವ ಕಪಟವ್ಯಕ್ತಿಗಳ ಬಗ್ಗೆ ಕೋಪ, ಪ್ರಿಯಜನರ ವಿಯೋಗದಿಂದ ಕಣ್ಣೀರು, ತಾಯಿ–ತಂದೆ, ಸಹೋದರ–ಸಹೋದರಿಯರು, ಮಡದಿ ಮತ್ತು ಬಂಧುಜನರ ಮೇಲಣ ದಿವ್ಯಪ್ರೇಮ – ಇವೆಲ್ಲವನ್ನೂ ಕಂಡು ಬೆರಗಾಗುತ್ತೇವೆ. ಶ್ರೀರಾಮಕೃಷ್ಣರು ಶಾರೀರಕ ವ್ಯಾಧಿಯಿಂದ ಎಷ್ಟು ಯಾತನೆ, ನೋವು ಅನುಭವಿಸಿದರು ಎನ್ನುವ ವಿಷಯವನ್ನೂ, ಅದೇ ಸಮಯದಲ್ಲಿಯೇ ಸಮಾಧಿಯ ಮಹದಾನಂದದಲ್ಲಿ ಯಾವ ರೀತಿ ಲೀನವಾಗಿರುತ್ತಿದ್ದರೆಂಬುದನ್ನೂ ನಾವೆಲ್ಲರೂ ಓದಿ ತಿಳಿದುಕೊಂಡಿದ್ದೇವೆ. ಅವರು ನರ್ತಿಸುವುದನ್ನು, ಗಾನ ಮಾಡುವುದನ್ನೂ ನೋಡುತ್ತೇವೆ. ಅವರ ಅಲೌಕಿಕ ಮೃದುಮಂದಹಾಸವನ್ನೂ, ಇತರರನ್ನು ತಮಾಷೆ ಮಾಡಿ ನಗಿಸುವುದನ್ನೂ ನೋಡುತ್ತೇವೆ. ಹಾಗೆಯೇ ಶಿಷ್ಯರನ್ನು ಗದರಿಸುವುದನ್ನೂ, ಅದೇ ಸಮಯದಲ್ಲಿ ಅವರ ಮೇಲೆ ತಮ್ಮ ನಿರ್ವ್ಯಾಜಪ್ರೀತಿಯ ಮಳೆಗರೆಯುವುದನ್ನೂ ಕಾಣುತ್ತೇವೆ.

ಈ ಎಲ್ಲಾ ಸಾಮಾನ್ಯರೂಪದ ಚಟುವಟಿಕೆಗಳನ್ನು ಕಂಡು, 'ಈ ಅವತಾರಪುರುಷ, ಸ್ವರ್ಗದ ಸಿಂಹಾಸನದಲ್ಲಿ ಅಧಿಷ್ಠಿತರಾದ ಈಶ್ವರನಲ್ಲ, ನಮ್ಮಂತೆಯೇ ಇದೇ ಭೂಮಂಡಲಕ್ಕೆ ಸೇರಿದ ಮಾನವ' ಎಂದು ನಾವು ತಪ್ಪಾಗಿ ಅರ್ಥ ಮಾಡಿಕೊಳ್ಳುತ್ತೇವೆ. ಪ್ರೇಮಿಯೊಬ್ಬ ತನ್ನ ಪ್ರಿಯತಮನ ಅತಿಕ್ಷುಲ್ಲಕವೆನಿಸಿದ ಸಣ್ಣಪುಟ್ಟ ಕೆಲಸಗಳನ್ನು ಕೂಡ, ಅತ್ಯಂತ ಅಮೂಲ್ಯ ಮತ್ತು ಆನಂದದಾಯಕವೆಂದು ಸ್ವೀಕರಿಸಿ, ಹೃದಯಾಂತರಾಳದಲ್ಲಿ ಸಂರಕ್ಷಿಸಿಕೊಳ್ಳುತ್ತಾನೆ. ಇದರಂತೆಯೇ ಅವತಾರಪುರುಷನ ಕ್ರಿಯೆಗಳು ಕೂಡ. ಅವತಾರಪುರುಷನ ಈ ರೀತಿಯ ಸಾಮಾನ್ಯ ವ್ಯವಹಾರಗಳು ನಮ್ಮನ್ನು ಅವರತ್ತ ಆಕರ್ಷಿಸುತ್ತವೆ; ಅವರ ದಿವ್ಯ ಸಾಮೀಪ್ಯವು ಸುಖವನ್ನು ನೀಡುತ್ತದೆ. ಅವರೆಡೆಗೆ ನಮ್ಮ ಅನುರಾಗವು ವೃದ್ಧಿಸಿ, ಅವರು ನಮ್ಮ ಅತ್ಯಂತ ಸಮೀಪ ಬಂಧುವೆನಿಸುತ್ತಾರೆ, ನಮ್ಮ ಪ್ರೀತ್ಯಾದರಗಳಿಗೆ ಪಾತ್ರರಾಗುತ್ತಾರೆ.